ಾಠ 8

# ಿಮ್ಮ
# ಜೀವಿತವು
# ಬೆಳಕಾಗಿದೆ



**ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು**

ಲೋಕಕ್ಕೆ ಬೆಳಕು
ನಿಮ್ಮ ಮೇಣದ ಬತ್ತಿ
ನಂಬಿಗಸ್ತರಾಗಿರುವುದು
ದೇವರ ಮಗುವಿನಂತೆ ಮಾತಾಡುವುದು
ಇತರರಿಗೆ ಸಹಾಯ ಮಾಡುವುದು
ಬುದ್ಧಿಪೂರ್ವಕವಾಗಿ ನಡೆದುಕೊಳ್ಳುವುದು
ಶುಚಿಯಾಗಿಡುವುದು
ಸಭ್ಯರಾಗಿರುವುದು
ಪ್ರಾಮಾಣಿಕ ಕೆಲಸ
ನಿಮ್ಮ ಕುಟುಂಬದೊಂದಿಗೆ ಸರಿಯಾದ ವರ್ತನೆ

ಇದುವರೆಗೆ ನಾವು ನಿಮ್ಮ ಹೊಸ ಜೀವಿತ ಮತ್ತು ಅದರ ವೃದ್ಧಿ ಹೇಗೆ ೦ದು ಹೇಳಿದೆವು. ಈ ಪಾಠದಲ್ಲಿ ನಾವು ನಿಮ್ಮ ಜೀವಿತವು ನಿಮ್ಮ ಸುತ್ತಲೂ ರುವವರಿಗೆ ಏನು ಮಾಡಬೇಕು ಎಂದು ಕುರಿತು ಯೋಚಿಸುತ್ತೇವೆ.

## ಲೋಕಕ್ಕೆ ಬೆಳಕು

ದೇವರ ಕುರಿತಾಗಿರುವ ಪಾಪ, ದೋಷ ಮತ್ತು ಅಜ್ಞಾನವು ಅಂಧಕಾರದಂತೆ ದೆ ಎಂದು ಸತ್ಯವೇದವು ನಮಗೆ ಬೋಧಿಸುತ್ತದೆ. ಕ್ರಿಸ್ತನಿಲ್ಲದ ಪ್ರತಿಯೊಬ್ಬನು

ಈ ಕತ್ತಲೆಯಲ್ಲಿ ತಡಕಾಡುತ್ತಾನೆ-ಕಳೆದುಹೋದವನಾಗಿ ಸೈತಾನನಿಂದ ವಂಚಿತನಾಗಿ
ನಿತ್ಯಜೀವದ ಮಾರ್ಗವನ್ನು ಕಾಣುವಲ್ಲಿ ವಿಫಲನಾಗಿದ್ದಾನೆ.

ದೇವರು ತನ್ನ ಕರುಣೆಯಲ್ಲಿ ಯೇಸು ಕ್ರಿಸ್ತನನ್ನು ಲೋಕಕ್ಕೆ ಬೆಳಕಾಗಿರಲ
ಕಳುಹಿಸಿದನು.

> ಯೋಹಾನ 8:12 ಯೇಸು ತಿರಿಗಿ ಅವರ ಸಂಗಡ ಮಾತಡಲಾರಂಭಿಸಿ
> "ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯ
> ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು" ಎಂದ
> ಹೇಳಿದನು.

## ನೀವು ಮಾಡಬೇಕಾದದ

1. ಯೋಹಾನ 8:12 ಬಾಯಿಪಾಠ ಮಾಡಿರಿ

## ನಿಮ್ಮ ಮೇಣದ ಬತ್ತಿ

ನಿಮ್ಮ ಜೀವಿತವು ಒಂದು ಮೇಣದ ಬತ್ತಿ, ಒಂದು ದೀಪ, ಅಥವ
ಒಂದು ವಿದ್ಯುಚ್ಛಕ್ತಿಯ ಬಲ್ಬಿನೋಪಾದಿಯಲ್ಲಿದೆ. ನಿಮ್ಮಲ್ಲಿ ಯೇಸುವಿನ ಸಾನಿಧ್ಯ
ಒಂದು ಉರಿಯಂತೆ ಮೇಣದ ಬತ್ತಿಯನ್ನು ಬೆಳಗಿಸುತ್ತದೆ. ಇಲ್ಲವೆ ಒಂದ
ಬಲ್ಬನ್ನು ವಿದ್ಯುಚ್ಛಕ್ತಿಯಿಂದ ನಿಮ್ಮನ್ನು ಬೆಳಗಿಸುವಂತೆ ನಿಮ್ಮನ್ನು ಬೆಳಗಿಸುತ್ತ

ಜ್ಞಾನೋಕ್ತಿಗಳು 20:27... ಯೋಹೋವನ ದೀಪವಾಗಿದೆ. ಅದ
ಅಂತರಂಗವನ್ನೆಲ್ಲಾ ಶೋಧಿಸುತ್ತದೆ.

ನೀವು ದೇವರ ಮೇಣದ ಬತ್ತಿ, ಮತ್ತು ಆತನ ದೀಪವಾಗಿದ್ದೀ
ಯೇಸುವಿನ ಒಳ್ಳೇತನ ಮತ್ತು ಸತ್ಯವು ನಿಮ್ಮ ಕಾರ್ಯಗಳ ಮೂಲಕ ಬೆಳಗಬೇಕ

> ಮತ್ತಾಯ 5:14,16 ನೀವು ಲೋಕಕ್ಕೆ ಬೆಳಕಾಗಿದ್ದೀರಿ... ನಿಮ್ಮ ಬೆಳ
> ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೆ ಕ್ರಿಯೆಗಳ
> ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು

## ನೀವು ಮಾಡಬೇಕಾದದ್ದು

2. ನೀವು ಇತರ ಜನಿರಗೆ ಬೆಳಕಾಗಿದ್ದೀರಿ ಯಾಕಂದರೆ
   ...ಅ) ನೀವು ಯಾವಾಗಲೂ ಅಂತಹ ಆಶ್ಚರ್ಯಕರ ವ್ಯಕ್ತಿಯಾಗಿದ್ದೀರಿ
   ...ಆ) ನಿಮ್ಮ ಮನಸ್ಸು ತೀಕ್ಷ್ಣಬುದ್ದಿಯುಳ್ಳದ್ದಾಗಿದೆ.
   ...ಇ) ಯೇಸುವಿನ ಸಾನಿಧ್ಯ, ಒಳ್ಳೇತನ ಮತ್ತು ಸತ್ಯ ನಿಮ್ಮ ಮೂಲಕ ಬೆಳಗುತ್ತದೆ.
3. ಜ್ಞಾನೋಕ್ತಿಗಳು 20:27 ಬಾಯಿಪಾಠ ಮಾಡಿರಿ
4. ಮತ್ತಾಯ 5:14,16 ಬಾಯಿಪಾಠ ಮಾಡಿರಿ

**ಉತ್ತರ** : 2. ಇ) ಯೇಸುವಿನ ಸಾನಿಧ್ಯ, ಒಳ್ಳೇತನ ಮತ್ತು ಸತ್ಯ ನಿಮ್ಮ ಮೂಲಕ ಬೆಳಗುತ್ತದೆ.

ದೇವರು ನಿಮ್ಮನ್ನು ಕತ್ತಲೆಯಲ್ಲಿ ಒಂದು ದೀಪವನ್ನಾಗಿ ಇಟ್ಟಿದ್ದಾನೆ. ಆದುದರಿಂದ ನಿಮ್ಮ ಜೀವಿತದ ಮೂಲಕ ನೀವು ಸುತ್ತಲೂ ಇರುವವರಿಗೆ ರಕ್ಷಕನ ಮತ್ತು ಸ್ವರ್ಗದ ಕಡೆಗಿರುವ ಮಾರ್ಗವನ್ನು ತೋರಿಸಿರಿ. ನೀವು ದೇವರ ಶಕ್ತಿಯ ಬಗ್ಗೆ ಹೇಳುವುದು ಸತ್ಯವ್ರೋ ಎಂದು ಅನೇಕರು ನಿಮ್ಮನ್ನು ಗಮನಿಸುತ್ತಿದ್ದಾರೆ. ನಿಮ್ಮ ಜೀವಿತವು ಒಬ್ಬ ವ್ಯಕ್ತಿಯನ್ನು ಬದಲಾವಣೆ ಮಾಡುವ ಸುವಾರ್ತೆಯ ಶಕ್ತಿಯನ್ನು ತೋರಿಸುತ್ತದೆ. ನೀವು ಕ್ರಿಸ್ತನಿಗಾಗಿ ಸಾಕ್ಷಿಗಳಾಗಿದ್ದೀರಿ. ನೀವು ಮಾಡುವಂತಹದು ಆತನಿಗೆ ನಿಮ್ಮ ಮಾತುಗಳಿಗಿಂತಲೂ ಒಂದು ಹೆಚ್ಚಿನ ಸಾಕ್ಷಿಯಾಗಿದೆ.

## ನೀವು ಮಾಡಬೇಕಾದದ್ದು

5. ಯೇಸುವಿನ ಬೋಧನೆಗಳಿಗನುಸಾರವಾಗಿ ಜೀವಿಸುವುದು
   ...ಅ) ಇತರರಿಗೆ ಸುವಾರ್ತಾ ಶಕ್ತಿಯ ಮನವರಿಕೆಯನ್ನು ಮಾಡಲು ಒಂದು ಬಲವಾದ ಸಾಕ್ಷಿಯಾಗಿದೆ.

...ಅ) ಪ್ರಾಮುಖ್ಯವಲ್ಲದ್ದು, ಇತರರನ್ನು ಕ್ರಿಸ್ತನ ಬಳಿಗೆ ನಡಿಸಲು ಉತ್ತಮ ಪ್ರಸಂಗಬೇಕು.

6. ನಿಮಗೆ ಯಾರಾದಾದರು ಜೀವಿತವು ಯೇಸುವನ್ನು ಅನುಸರಿಸುವ ಹಾಗೆ ಮಾಡಿದೆಯೋ?......................................................

7. ನೀವು ಕರ್ತನಿಗಾಗಿ ಒಂದು ಹೊಳೆಯುವ ದೀಪವಾಗಬೇಕೆಂದು ಇಚ್ಛೆಸಿದ್ದಿರೋ?.......................................................

8. ಕರ್ತನ ದೀಪವಾಗಿರುವ ನೀವು ನಿಮ್ಮ ದೀಪವು ಕತ್ತಲೆಯಲ್ಲಿ ಬೆಳಗುವಂತೆ ಮಾಡಲು ಆತನು ನಿಮ್ಮನ್ನು ಅತಿ ಕತ್ತಲಿರುವ ಸ್ಥಳಕ್ಕೆ ಕರೆದೊಯ್ಯಲು ನೀವು ಇಷ್ಟಪಡುತ್ತೀರೋ?..................................................

9. ಕರ್ತನು ನಿಮ್ಮನ್ನು ಪ್ರತಿದಿನವು ಇತರರನ್ನು ಸ್ವರ್ಗದ ಮಾರ್ಗಕ್ಕೆ ನಡೆಸುವಂತೆ ಉಪಯೋಗಿಸಿಕೊಳ್ಳಲು ಪ್ರಾರ್ಥಿಸಿರಿ.

**ಉತ್ತರ** : 5. ಅ) ಇತರರಿಗೆ ಸುವಾರ್ತೆ ಶಕ್ತಿಯನ ಮನವರಿಕೆಯನ್ನು ಮಾಡಲು ಒಂದು ಬಲವಾದ ಸಾಕ್ಷಿಯಾಗಿದೆ.

ಒಬ್ಬ ಶಿಷ್ಯನ ಜೀವಿತದಲ್ಲಿ ಹೊಳೆಯುವ ಮತ್ತು ಇತರರನ್ನು ಸುವಾರ್ತಾ ಸತ್ಯಕ್ಕೆ ಮನಗಾಣಿಸುವಂತೆ ಮಾಡುವ ಕೆಲವು ಬೆಳಕಿನ ಕಿರಣಗಳನ್ನು ನೋಡುವಾ.

## ನಂಬಿಗಸ್ತರಾಗಿರುವುದು

ನಿಮ್ಮ ಬಾಕಿ ಹಣವನ್ನು ತಕ್ಷಣವೇ ತೀರಿಸುವುದು ಒಂದು ಉತ್ತಮ ಸಾಕ್ಷಿ. ಒಬ್ಬ ಶಿಷ್ಯನು ತನ್ನೆಲ್ಲಾ ವ್ಯವಹಾರಗಳನ್ನು ಯೋಗ್ಯನಾಗಿಯೂ ಮತ್ತು ನಂಬಿಗಸ್ತನಾಗಿಯೂ ಇರಬೇಕು. ಆತನು ಸಾಲವನ್ನು ತಕ್ಷಣದಲ್ಲಿ ತೀರಿಸಬೇಕು ಮತ್ತು ತಾನು ಎರವಲು ತಂದ ವಸ್ತುಗಳನ್ನು ಉತ್ತಮ ಸ್ಥಿತಿಯಲ್ಲಿ ಹಿಂತಿರುಗಿಸಬೇಕು ತನ್ನಿಂದ ತೀರಿಸಲಾಗದಂತ ಹಣಕಾಸಿನ ಹೊಣೆಗಳನ್ನು ಆತನು ತೆಗೆದುಕೊಳ್ಳಬಾರದು

> ರೋಮಾಪುರದವರಿಗೆ 13:7 ಅವರವರಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ, ಯಾರಿಗೆ ಕಂದಾಯವೋ ಅವರಿಗೆ ಕಂದಾಯವನ್ನು, ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು, ಯಾರಿಗೆ ಭಯವೋ ಅವರಿಗೆ ಭಯವನ್ನು, ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ.

ರೋಮಾಪುರದವರಿಗೆ 12:17 ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ. ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ.

**ನೀವು ಮಾಡಬೇಕಾದದ್ದು**

10. ಕೊಡದಿರುವ ಬಾಕಿಗಳು

...ಅ) ನಮ್ಮ ಸಾಕ್ಷಿಯನ್ನು ಬಲಹೀನಪಡಿಸುವುದು.

...ಆ) ಒಂದು ವೇಳೆ ನಮ್ಮ ಮಾರ್ಪಾಟಿನ ಮೊದಲು ಮಾಡಿದ್ದರೆ ಮರೆತುಬಿಡುವುದು.

**ಉತ್ತರ** : 10.ಅ) ನಮ್ಮ ಸಾಕ್ಷಿಯನ್ನು ಬಲಹೀನ ಪಡಿಸುವುದು.

---

## ದೇವರ ಮಗುವಿನಂತೆ ಮಾತನಾಡುವುದು

ಒಂದು ವೇಳೆ ನೀವು ಶಪಿಸಿದ್ದರೆ, ಆಣೆಯಿಟ್ಟಿದ್ದರೆ ಇಲ್ಲವೆ ಅಸಭ್ಯಕತೆಗಳನ್ನು ಹೇಳಿದ್ದರೆ ಜನರು ದೇವರ ರಕ್ಷಣಾ ಶಕ್ತಿಯ ಕುರಿತು ಏನೆಂದು ಯೋಚಿಸಾರು? ಒಂದು ವೇಳೆ ನೀವು ಜಗಳವಾಡಿದ್ದರೆ, ಇನ್ನೊಬ್ಬರ ವಿಷಯದಲ್ಲಿ ಆಡಿಕೊಂಡಿದ್ದರೆ, ಇತರರನ್ನು ಖಂಡಿಸಿದರೆ, ನಿಮ್ಮ ಕುರಿತು ಬಡಾಯಿಕೊಚ್ಚಿದ್ದರೆ, ಸುಳ್ಳು ಹೇಳಿದ್ದರೆ, ಕಠಿಣವಾಗಿ ಮಾತಾಡಿದ್ದರೆ ಮತ್ತು ಅಶ್ಲೀಲ ಭಾಷೆ ಆಡಿದ್ದರೆ ದೇವರಿಗಾಗಿ ನಿಮ್ಮ ದೀಪವು ಬೆಳಗಿತೋ?

ಇನ್ನೊಂದು ಕಡೆಯಲ್ಲಿ, ಅನೇಕ ಜನರು ಶಿಷ್ಯರಾದವರ ಬದಲಾದ ಮಾತುಗಳನ್ನು ಕೇಳಿ ಸುವಾರ್ತಾಶಕ್ತಿಯ ಬಗ್ಗೆ ಮನವರಿತುಕೊಂಡಿದ್ದಾರೆ.

ಪ್ರತಿಯೊಬ್ಬರಿಗೂ ಕಷ್ಟಕರವಾದ ವಿಷಯವೆಂದರೆ ತಮ್ಮ ನಾಲಿಗೆಯನ್ನು ಹಿಡಿತದಲ್ಲಿಟ್ಟುಕೊಳ್ಳುವುದು. ಕೇವಲ ನಿಮ್ಮ ಮಾತುಗಳಲ್ಲಿ, ನಿಮ್ಮ ಧ್ವನಿಯ ಏರಿಳಿತವು ಅನೇಕರನ್ನು ಕ್ರಿಸ್ತನ ಬಳಿಗೆ ಎಳೆಯುತ್ತದೆ ಇಲ್ಲವೆ ಆತನಿಗೆ ವಿರುದ್ಧವಾಗುವಂತೆ ಮಾಡುತ್ತದೆ.

ಯಾಕೋಬ 1:26 ಯಾವನಾದರೂ ತನ್ನ ನಾಲಿಗೆಗೆ ಕಡಿವಾಣವನ್ನು ಹಾಕದೆ ತನ್ನ ಹೃದಯವನ್ನು ಮೋಸಗೊಳಿಸುವವನಾದರೆ ಅವನ ಭಕ್ತಿ ನಿಷ್ಪ್ರಯೋಜಕವಾಗಿದೆ.

### ನೀವು ಮಾಡಬೇಕಾದದ್ದು

11. ನಿಮ್ಮನ್ನು ನೀವೆ ವಿಚಾರಿಸಿರಿ. "ನಾನು ಮಾತನಾಡುವ ರೀತಿಯು ಜನರು ದೇವರ ಪ್ರೀತಿಯನ್ನು ತಿಳಿದುಕೊಳ್ಳುವಂತೆ ಮಾಡುತ್ತದೋ? ಅಥವಾ ನಾನು ಜನರನ್ನು ರೇಗಿಸುತ್ತೇನೋ? ಒಂದು ವೇಳೆ ನಾನು ಯೇಸುವನ್ನು ನನ್ನ ಪಕ್ಕದಲ್ಲಿ ನೋಡಿಯೂ ಮೊದಲಿನ ಹಾಗೆ ನಾನು ಈಗಲೂ ಮಾತಾಡುತ್ತಿದ್ದೆನೋ?"

12. ನೀವು ಪ್ರತಿದಿನವೂ ಒಬ್ಬ ದೇವರ ಮಗುವಿನಂತೆ ಮಾತನಾಡಲು ಸಹಾಯ ಕೊಡುವಂತೆ ಯೇಸುವನ್ನು ಪ್ರಾರ್ಥಿಸಿರಿ.

**ಇತರರಿಗೆ ಸಹಾಯ ಮಾಡುವುದು**

ನಾವು ನಿಜವಾಗಲು "ನಮ್ಮ ನೆರೆಯವರನ್ನು ನಮ್ಮಂತೆ ಪ್ರೀತಿಸಿದರೆ" ನಾವ ಇದನ್ನು ಪ್ರಾಯೋಗಿಕವಾದ ರೀತಿಯಲ್ಲಿ ತೋರಿಸುವುದೆಂದರೆ ನಮ್ಮ ಸಹಾಯದ ಅಗತ್ಯವಿರುವವರಿಗೆ ಯಾವುದೇ ರೀತಿಯಲ್ಲಿ ಸಹಾಯ ಮಾಡುವುದು

### ನೀವು ಮಾಡಬೇಕಾದದ್ದು

13. ಕೊರತೆಯಲ್ಲಿದ್ದವರಿಗೆ ಅಂದರೆ ಅನಾಥರಿಗೆ ಮತ್ತು ವಿಧವೆಯರಿಗೆ ಸಹಾಯ ಮಾಡುವ ಯಾವುದೇ ನಿರ್ದಿಷ್ಟವಾದ ವಿಧವು ನಿಮ್ಮ ಸಭೆಗೆ ಉಂಟೋ?.... ನೀವು ಈ ಕೆಲಸದಲ್ಲಿ ಭಾಗ ತೆಗೆದುಕೊಳ್ಳುತಿದ್ದಿರೋ?....

14. ನಿಮ್ಮ ಸುತ್ತಲೂ ಇರುವ ಜನರ ಸಮಸ್ಯೆಗಳ ಮತ್ತು ಕಷ್ಟಗಳ ಕುರಿತು ಯೋಚಿಸಿರಿ. ನಿಮಗೆ ಸಹಾಯ ಮಾಡಲು ಯಾವುದಾದರೂ ಮಾರ್ಗ ಉಂಟೋ? ನೀವು ಅವರ ಕುರಿತು ಚಿಂತಿಸುತ್ತೀರಿ ಎಂದು ಅವರಿಗೆ ತಿಳಿದಿದೆಯೋ? ನೀವು ಕೊರತೆಯಲ್ಲಿರುವವರಿಗೆ ಸಹಾಯ ಮಾಡುವ ಒಬ್ಬ ನಿಜ ಮಿತ್ರನನ್ನಾಗಿ ಮಾಡುವಂತೆ ದೇವರಲ್ಲಿ ಪ್ರಾರ್ಥಿಸಿರಿ.

## ಬುದ್ಧಿಪೂರ್ವಕವಾಗಿ ನಡೆದುಕೊಳ್ಳುವುದು

1 ಥೆಸಲೋನಿಕದವರಿಗೆ 5:22 ಸಕಲ ವಿಧವಾದ ಕೆಟ್ಟತನಕ್ಕೆ ದೂರವಾಗಿರಿ.

ದೇವರಿಗಾಗಿರುವ ಒಬ್ಬ ವ್ಯಕ್ತಿಯ ಪ್ರಭಾವವು ಮೂರ್ಖ ಕಾರ್ಯಗಳಿಂದ ಹಾಳಾಗುವವು. ನೀವು ಮಾಡುವುದರ ಕುರಿತು ಇತರ ಜನರು ಏನು ಹೇಳುತ್ತಾರೆ? ಬುದ್ಧಿಪೂರ್ವಕವಾಗಿ ನಡೆದುಕೊಳ್ಳಿರಿ. ನೀವು ಮಾಡುವವುಗಳಲ್ಲೆಲ್ಲಾ ಒಳ್ಳೆಯ ಮಾದರಿಯಾಗಿರಿ ಮತ್ತು ದೇವರಿಗಾಗಿ ನಿಮ್ಮ ದೀಪವು ನಿಚ್ಚಳವಾಗಿ ಬೆಳಗಲಿ.

ರೋಮಾಪುರದವರಿಗೆ 14:16 ನಿಮಗಿರುವ ಮೇಲು ದೂಷಣೆಗೆ ಆಸ್ಪದವಾಗಬಾರದು.

1 ತಿಮೋಥೆಯನಿಗೆ 4:12 ಯೌವನಸ್ಥನೆಂದು ನಿನ್ನನ್ನು ಅಸಡ್ಡೆ ಮಾಡುವುದಕ್ಕೆ ಯಾರಿಗೂ ಅವಕಾಶಕೊಡದೆ ನಂಬುವವರಿಗೆ ನಡೆ, ನುಡಿ, ಪ್ರೀತಿ, ನಂಬಿಕೆ, ಶುದ್ಧತ್ವ ಇವುಗಳ ವಿಷಯದಲ್ಲಿ, ನೀನೇ ಮಾದರಿಯಾಗಿರು.

## ನೀವು ಮಾಡಬೇಕಾದದ್ದು

15. 1 ತಿಮೊಥೆಯನಿಗೆ 4:12ರಲ್ಲಿ ಪೌಲನು ತಿಮೊಥೆಯನಿಗೆ ವಿಶ್ವಾಸಿಗಳಲ್ಲಿ ಮಾದರಿಯಾಗಬೇಕೆಂದದ್ದು

...ಅ) ಅತಿಥಿ ಸತ್ಕಾರ, ಸಭ್ಯತನ, ಮಾತುಕತೆ ಮತ್ತು ಕೆಲಸ

...ಆ) ಶುದ್ಧಜೀವಿತ, ಪ್ರೀತಿ, ಸುವಾರ್ತೆ ಮತ್ತು ಸಂತೋಷ

...ಇ) ಮಾತುಕತೆ, ನಡತೆ, ಪ್ರೀತಿ ನಂಬಿಕೆ ಮತ್ತು ಶುದ್ಧತೆ

**ಉತ್ತರ:** 12. ಇ) ಮಾತುಕತೆ, ನಡತೆ, ಪ್ರೀತಿ, ನಂಬಿಕೆ ಮತ್ತು ಶುದ್ಧತೆ

## ಶುಚಿಯಾಗಿಡುವುದು

ಒಬ್ಬ ಶಿಷ್ಯನು ಸ್ವಚ್ಛತೆಯ ಕಟ್ಟಳೆಗಳನ್ನು ಪಾಲಿಸಲು ಪ್ರಯತ್ನಿಸಿದಂತೆ, ಅವನು ತನ್ನ ಮನೆಯಲ್ಲಿ, ತನ್ನ ಬಟ್ಟೆಗಳಲ್ಲಿ ಮತ್ತು ತನ್ನ ವ್ಯಕ್ತಿತ್ವದಲ್ಲಿ ಸ್ವಚ್ಛತೆಯ

ಒಂದು ಮಾದರಿಯನ್ನು ಇಟ್ಟುಕೊಳ್ಳುವನು. ಆದರೆ ಸ್ವಚ್ಛತೆಯು ಇಷ್ಟು ಮಾತ್ರವೆ ಅಲ್ಲ, ನಿಮ್ಮ ದೇಹವು ಪವಿತ್ರಾತ್ಮನಿಗೆ ಗರ್ಭಗುಡಿಯಾಗಿದೆ. ಆದುದರಿಂದ ನೀವು ಅದನ್ನು ಒಳಗೂ ಮತ್ತು ಹೊರಗೂ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ನಿಮ್ಮ ದೇಹವು ಕೊಳೆಯಾಗದಂತೆ, ಬಲಹೀನವಾಗದಂತೆ ಇಲ್ಲವೆ ಕೆಟ್ಟಕಾರ್ಯಗಳಿಂದ ರೋಗಹಿಡಿಯದಂತೆ ನೋಡಿಕೊಳ್ಳಬೇಕು. ನಿಮ್ಮ ದೇಹವನ್ನು ಕರ್ತನ ಕೆಲಸ ಮಾಡುವುದಕ್ಕಾಗಿ ಮತ್ತು ಆರೋಗ್ಯವುಳ್ಳದ್ದಾಗಿ ಇಡಿರಿ.

## ನೀವು ಮಾಡಬೇಕಾದದ್ದು

16. (ಎರಡನ್ನು ಬರೆಯಿರಿ) ಶುಚಿಯಾಗಿಡುವುದು

...ಅ) ಒಬ್ಬ ವ್ಯಕ್ತಿಯು ಬಡವನಾಗಿದ್ದರೆ ಇದು ಪ್ರಾಮುಖ್ಯವಲ್ಲ.

...ಆ) ಒಬ್ಬ ವ್ಯಕ್ತಿಯ ಆರೋಗ್ಯದ ಮೇಲೆ ಪರಿಣಾಮವಾಗುತ್ತದೆ.

...ಇ) ನಾವು ಕೊಡುವ ಸಾಕ್ಷಿಯ ಮೇಲೆ ಪರಿಣಾಮವಾಗುತ್ತದೆ.

**ಉತ್ತರಗಳು**: 16ಆ) ಒಬ್ಬ ವ್ಯಕ್ತಿಯ ಆರೋಗ್ಯದ ಮೇಲೆ ಪರಿಣಾಮವಾಗುತ್ತದೆ ಇ) ನಾವು ಕೊಡುವ ಸಾಕ್ಷಿಯ ಮೇಲೆ ಪರಿಣಾಮವಾಗುತ್ತದೆ.

ಸಿಗರೇಟ್ ಸೇದುವುದು ಶ್ವಾಸಕೋಶದ ಕ್ಯಾನ್ಸರ್ ಮತ್ತು ಅನೇಕ ರೋಗಗಳಿಗೆ ಕಾರಣವಾಗಿದೆ ಎಂದು ತಿಳಿದಿದೆ. ಅಲ್ಲದೆ ಮಾದಕ ಪೇಯ ಮತ್ತು ಮಾದಕ ವಸ್ತುಗಳ ಸೇವನೆಯಿಂದ ಪ್ರತಿವರ್ಷ ಸಾವಿರಾರು ಜನರು ಸಾಯುತ್ತಾರೆ. ನಾವು ತಕ್ಷಣದಲ್ಲಾಗಲಿ ಇಲ್ಲವೆ ಕ್ರಮೇಣದಲ್ಲಾಗಲಿ ಆತ್ಮಹತ್ಯೆ ಮಾಡಿಕೊಳ್ಳಬಾರದು. ಯಾಕಂದರೆ ಇದು "ದೇವರ ಆಲಯವನ್ನು ನಾಶಮಾಡುವುದು"

> 1 ಕೊರಿಂಥದವರಿಗೆ 3:16,17 ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸ ಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ? ಯಾವನಾದರೂ ದೇವರ ಆಲಯವನ್ನು ಕೆಡಿಸಿದರೆ ದೇವರು ಅವನನ್ನು ಕೆಡಿಸುವನು. ಯಾಕಂದರೆ ದೇವರ ಆಲಯವು ಪವಿತ್ರವಾದದ್ದು, ಆ ಆಲಯವು ನೀವೇ.

## ನೀವು ಮಾಡಬೇಕಾದದ್ದು

17 ನಾವು ಕುಡಿಕತನ, ಮಾದಕ ವಸ್ತುಗಳ ಸೇವನೆ, ತಂಬಾಕು ಸೇವನೆ ಮತ್ತು ಮಾದಕ ಪೇಯಗಳ ಸೇವನೆಯನ್ನು ವಿರೋಧಿಸುತ್ತೇವೆ. ಯಾಕಂದರೆ

...ಅ) ದುಬಾರಿಯ ಕೆಟ್ಟ ಚಟಗಳನ್ನು ಮಾಡಲು ಹಣ ವೆಚ್ಚವಾಗುವುದು.

...ಆ) ಪವಿತ್ರಾತ್ಮನಿಗೆ ಆಲಯವಾಗಿರುವ ದೇಹಕ್ಕೆ ಇವುಗಳ ಸೇವನೆಯಿಂದ ಕೇಡಾಗುವುದು

**ಉತ್ತರ** : 17. ಆ) ಪವಿತ್ರಾತ್ಮನಿಗೆ ಆಲಯವಾಗಿರುವ ದೇಹಕ್ಕೆ ಇವುಗಳ ಸೇವನೆಯಿಂದ ಕೇಡಾಗುವುದು

**ಸತ್ಯವೇದವು ಕುಡಿಕತನವನ್ನು ನಿಷೇಧಿಸುತ್ತದೆ.**

1 ಕೊರಿಂಥದವರಿಗೆ 6:9-11 ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂದು ನಿಮಗೆ ತಿಳಿಯದೋ? ಮೋಸಹೋಗಬೇಡಿರಿ, ಜಾರರು, ವಿಗ್ರಹಾರಾಧಕರು, ವ್ಯಭಿಚಾರಿಗಳು, ವಿಟರು, ಪುರುಷಗಾಮಿಗಳು, ಕಳ್ಳರು, ಲೋಭಿಗಳು, ಕುಡಿಕರು, ಬೈಯ್ಯುವವರು, ಸುಲುಕೊಳ್ಳುವವರು ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲ. ನಿಮ್ಮಲ್ಲಿ ಕೆಲವರು ಅಂಥವರಾಗಿದ್ದೀರಿ, ಆದರೂ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ.

ನಿಮಗೆ ಇವುಗಳ ಕುರಿತು ಯಾವುದಾದರೂ ಸಮಸ್ಯೆದಿದ್ದರೆ ನಿಮ್ಮ ಬೋಧಕರೊಂದಿಗೆ ಮಾತಾಡಿರಿ. ನೀವು ಅವುಗಳ ಮೇಲೆ ಸಂಪೂರ್ಣ ಜಯ ಸಾಧಿಸಲು ಅವರಿಗೆ ಮತ್ತು ಸಭೆಯವರಿಗೆ ಪ್ರಾರ್ಥಿಸಲು ಕೇಳಿಕೊಳ್ಳಿರಿ. ಪಾಪದ ಮತ್ತು ಕೆಟ್ಟತನದ ಸರಪಳಿಯಿಂದ ಬಿಡುಗಡೆಯಾಗಬೇಕೆಂದು ನೀವು ಇಚ್ಛಿಸುವವರಿಗೆ ನಿಮ್ಮ ಬದಲಾದ ಜೀವಿತವು ಒಂದು ಸಾಕ್ಷಿಯಾಗುವುದು.



### ನೀವು ಮಾಡಬೇಕಾದದ್ದು

18. ಒಬ್ಬ ಶಿಷ್ಯನಿಗೆ ತನ್ನ ದುರಭ್ಯಾಸಗಳ ಮೇಲೆ ಜಯಹೊಂದಲು ಕಷ್ಟಕರವಾಗಿದ್ದರೆ, ಅವನು ಮಾಡಬೇಕಾದದ್ದೇನೆಂದರೆ

    ...ಅ) ಸಭೆಗೆ ಹೋಗುವುದನ್ನು ನಿಲ್ಲಿಸಬೇಕು

    ...ಆ) ಗುಪ್ತವಾಗಿ ತನ್ನ ದುರಭ್ಯಾಸಗಳನ್ನು ಮಾಡಬೇಕು

    ...ಇ) ತನಗಾಗಿ ಪ್ರಾರ್ಥಿಸುವಂತೆ ಬೋಧಕರಿಗೆ ಮತ್ತು ಇತರ ಶಿಷ್ಯರಿಗೆ ಕೇಳಬೇಕು.

**ಉತ್ತರ** : 18 ಇ) ತನಗಾಗಿ ಪ್ರಾರ್ಥಿಸುವಂತೆ ಬೋಧಕರಿಗೆ ಮತ್ತು ಇತರ ಶಿಷ್ಯರಿಗೆ ಕೇಳಬೇಕು.

---

## ಸಭ್ಯರಾಗಿರುವುದು

---

ನಮ್ಮ ಮಾತುಕತೆಯಲ್ಲಿ, ಕಾರ್ಯಗಳಲ್ಲಿ ಮತ್ತು ವ್ಯಕ್ತಿತ್ವದಲ್ಲಿ ನಾವು ಸಭ್ಯರಾಗಿರಬೇಕು. ಸಭ್ಯತನವು ಹೆಮ್ಮೆ ಮತ್ತು ಅಹಂಕಾರಗಳಿಗೆ ತದ್‌ವಿರುದ್ಧವಾಗಿದೆ. ನಾವು ಇತರರಿಗಿಂತ ಉತ್ತಮರೆಂದು ವರ್ತಿಸಿದರೆ ಮತ್ತು ನಾವು ಮಾಡದಿರುವ ಕೆಲಸಗಳನ್ನು ಮಾಡುವಂತಹ ಜನರನ್ನು ಕೀಳಾಗಿ ನೋಡಿದರೆ, ನಾವು ಅವರನ್ನು ಕ್ರಿಸ್ತನಿಗಾಗಿ ಜಯಿಸುವುದಕ್ಕಿಂತ, ಆತನಿಂದ ಅವರನ್ನು ದೂರಮಾಡುತ್ತೇವೆ.

ನಾವು ಯಾರಾಗಿದ್ದೇವೆ. ನಾವು ಏನು ಮಾಡುತ್ತೇವೆ ಅಥವಾ ನಮಗೇನಿದೆ ಎಂಬುವುಗಳ ಕುರಿತು ಹೆಮ್ಮೆಪಟ್ಟುಕೊಳ್ಳಲು ನಮಗೆ ಯಾವ ಅಧಿಕಾರವಿಲ್ಲವೆಂದು

ನಾವು ಸ್ಪಷ್ಟವಾಗಿ ತಿಳಿದಿರಬೇಕು. ದೇವರು ನಮಗಾಗಿ ಮಾಡಿದ ಅಥವಾ ಕೊಟ್ಟ ಒಂದು ಸಂಗತಿಗಾದರೂ ನಾವು ಯೋಗ್ಯರಲ್ಲ. ನೆನಪಿನಲ್ಲಿಡಿ ಆತನ ಕರುಣೆ ಮತ್ತು ಆತನ ಕೆಲಸ ನಮ್ಮ ಜೀವಿತದಲ್ಲಿ ಇಲ್ಲದಿದ್ದರೆ ನಾವು ಈವರೆಗೂ ಲೋಕ ತಿಳಿಯದಿದ್ದಂತೆ ಅತಿ ದುಷ್ಟರು ಮತ್ತು ಭಯಂಕರ ಪಾಪಿಗಳಾಗಿರುತ್ತಿದ್ದೆವು.

ಒಬ್ಬ ಅಹಂಕಾರಿ, ಹೆಮ್ಮೆಯ ವ್ಯಕ್ತಿಯು ತನ್ನನ್ನು ಪ್ರತಿಯೊಬ್ಬರು ತಿಳಿದಿರಬೇಕೆಂದು ಬಯಸುತ್ತಾನೆ. ಅವನು ಆಡಂಬರ, ದುಬಾರಿ ವಸ್ತ್ರಾಲಂಕಾರ ಮತ್ತು ಆಭರಣಗಳಿಂದ ಅಥವಾ ತನ್ನ ಉಚ್ಛ ಜ್ಞಾನ ಮತ್ತು ಸಾಮರ್ಥ್ಯಗಳನ್ನು ತೋರಿಸುವ ಮುಖಾಂತರ ತನ್ನೆಡೆಗೆ ಗಮನ ಸೆಳೆಯುತ್ತಾನೆ. ಅವನು ಒಪ್ಪಿತ ವಸ್ತ್ರಾಲಂಕಾರ ಮತ್ತು ನಡತೆಗಳಿಗೆ ವಿರೋಧವಾಗಿ ಹೋಗುವ ಮೂಲಕ ಜನರು ತನ್ನನ್ನು ಗಮನಿಸುವಂತೆ ಮಾಡಲು ಯತ್ನಿಸುತ್ತಾನೆ. ಒಬ್ಬ ಗರ್ವಿಷ್ಟ ವ್ಯಕ್ತಿಯು ಕರ್ತನಲ್ಲಿರುವ ತನ್ನ ಆತ್ಮೀಕ ಅನುಭವ ಮತ್ತು ಪ್ರತಿಷ್ಠೆಯ ಕುರಿತು ಕೊಚ್ಚಿಕೊಳ್ಳಬಹುದು. ಒಬ್ಬ ಸಭ್ಯಸ್ಥನು ಹಾಗಿರಲಾರನು, ಆತನು ತನ್ನೆಡೆಗೆ ಗಮನ ಸೆಳೆಯಲು ಯತ್ನಿಸಲಾರನು.

ಒಬ್ಬ ಸಭ್ಯ ಶಿಷ್ಯನು ಅತಿರೇಕದ ಶೈಲಿಗಳನ್ನು, ಮಾನ್ಯವಲ್ಲದವುಗಳನ್ನು ಅಥವಾ ದೇವವ ಮಕ್ಕಳಿಗೆ ಕೆಟ್ಟದಾಗಿರುವವುಗಳನ್ನು ತೊರೆದುಬಿಡುತ್ತಾನೆ.

ಸತ್ಯವೇದದಲ್ಲಿ ಅನೇಕ ಭಾಗಗಳು ಸ್ತ್ರೀಯು ಸಭ್ಯಳಾಗಿಯು ವ್ಯರ್ಥವಾದವುಗಳ ಕುರಿತು ಎಚ್ಚರದಿಂದಿರಬೇಕೆಂದು ಪ್ರತ್ಯೇಕವಾಗಿ ಒತ್ತಿ ಹೇಳುತ್ತವೆ ಸ್ತ್ರೀಯು ತಾನು ಸುಂದರವಾಗಿರಬೇಕೆಂದು ಬಯಸುವುದು ಸ್ವಾಭಾವಿಕ ದೇವರು ಸೌಂದರ್ಯದ ವಿರೋಧಿಯಲ್ಲ, ಆತನು ಎಲ್ಲಾ ಶಿಷ್ಯರು ಸುಂದರವಾಗಿರಬೇಕೆಂದು ಬಯಸುತ್ತಾನೆ. ಕೀರ್ತನೆಗಳು 149:4ರಲ್ಲಿ "ದೀನರನ್ನು ರಕ್ಷಣೆಯಿಂದ ಭೂಷಿಸುತ್ತಾನೆ" ಎಂದು ಆತನು ವಾಗ್ದಾನ ಮಾಡಿದ್ದಾನೆ. ದೇವವು ನಮ್ಮ ಸೌಂದರ್ಯ ಅಂತರ್ಯದಿಂದ ಬರಬೇಕೆಂದು ಇಚ್ಛಿಸುತ್ತಾನೆ-ಒಂದು ಮನೋಹರವಾದ, ಸಂತೋಷವುಳ್ಳ ಮುಖದ ಮೂಲಕ ಹೊಳೆಯುವ ಒಂದು ಸುಂದರವಾದಂತ ಗುಣನಡತೆಯು, ಸೌಂದರ್ಯಕ್ಕೆ ಸಹಾಯಕವಾದ ಮೃದು ಮತ್ತು ಶಾಂತ ಆತ್ಮನನ್ನು ನಾವು ಭರಿಸಿಕೊಳ್ಳಬೇಕೆಂದು ಆತನು ಹೇಳುತ್ತಾನೆ.

> 1 ಪೇತ್ರ 3:4 ಸಾತ್ವಿಕವಾದ ಶಾಂತಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾದದ್ದು ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ.

19. ಸಭ್ಯತೆ

...ಅ) ಕ್ರಿಸ್ತನಂತಹ ಪಾವಿತ್ರ್ಯತೆ

...ಆ) ತಮ್ಮನ್ನು ತಾವು ಕಡಿಮೆಯಾಗಿ ನೋಡಿಕೊಳ್ಳುವ ಗುಣ

...ಇ) ವ್ಯರ್ಥತ್ವದ ಒಂದು ರೂಪ

**ಉತ್ತರ** : 19. ಅ) ಕ್ರಿಸ್ತನಂತಹ ಪಾವಿತ್ರ್ಯತೆ

---

**ಪ್ರಾಮಾಣಿಕ ಕೆಲಸ**

---

ನಾವು ನಮ್ಮ ಜೀವಿತದ ಸಂಪಾದನೆಗಾಗಿ ಪ್ರಾಮಾಣಿಕವಾಗಿ, ಕೆಲಸ ಮಾಡಬೇಕು ಮತ್ತು ಹಣದಾಸೆಯು ನಮ್ಮನ್ನು ಜೂಜಾಟಕ್ಕೆ, ಲಾಟರಿ ಆಟಕ್ಕೆ ಅಥವಾ ಯಾವುದೇ ಅದೃಷ್ಟದಾಟಕ್ಕೆ ನಡೆಸದಿರಲಿ. ನಾವು ಇತರರಿಗೆ ಕೇಡು ಮಾಡುವಂತಹದನ್ನು ಉತ್ಪಾದಿಸಲೂಬಾರದು, ಮಾರಲೂಬಾರದು.

1 ತಿಮೊಥೆ 6:10 ಹಣದಾಸೆಯು ಸಕಲವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ.



ನಾವು ಸೋಮಾರಿಗಳಾಗದೆ ಉತ್ತಮ ಕೆಲಸದವರಾಗಿರಬೇಕೆಂದು ದೇವರು ಬಯಸುತ್ತಾನೆ. ಯಾವುದೇ ದೂರು ಹೇಳದೆ ಉತ್ತಮವಾಗಿ ಕೆಲಸ ಮಾಡಿದಂತಹ ಶಿಷ್ಯರ ಜೀವಿತವು ಸುವಾರ್ತೆ ಶಕ್ತಿಯ ಸಭ್ಯತೆಯನ್ನು ಅನೇಕ ಮಾಲೀಕರು ಮನವರಿತುಕೊಳ್ಳುವಂತೆ ಮಾಡಿದೆ.

2 ಥೆಸಲೋನಿಕದವರಿಗೆ 3:10 ಕೆಲಸ ಮಾಡಲೊಲ್ಲದವನು ಊಟ ಮಾಡಬಾರದು.

1 ಥೆಸಲೋನಿಕದವರಿಗೆ 4:11,12 ನೀವು ಮತ್ತೊಬ್ಬರ ಕಾರ್ಯದಲ್ಲಿ ತಲೆಹಾಕದೆ ಸುಮ್ಮಗಿದ್ದು ಸ್ವಂತ ಕಾರ್ಯವನ್ನೇ ನಡೆಸಿಕೊಂಡು ಕೈಯಾರೆ ಕೆಲಸ

ಮಾಡುವುದೇ ಮಾನವೆಂದೆಣಿಸಿರಿ. ಹೀಗಿದ್ದರೆ ನೀವು ಹೊರಗಿನವರ ಎದುರಿನಲ್ಲಿ ಸಜ್ಜನರಾಗಿ ನಡೆದುಕೊಳ್ಳುವಿರಿ ಮತ್ತು ನಿಮಗೆ ಯಾವುದಕ್ಕೂ ಕೊರತೆಯಿರುವುದಿಲ್ಲ.

**ನೀವು ಮಾಡಬೇಕಾದದ್ದು**

20. ಸತ್ಯವೇದ ಬೋಧಿಸುವುದೇನೆಂದರೆ ಒಬ್ಬ ವ್ಯಕ್ತಿಗೆ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ
    ...ಅ) ಆತನು ಒಡೆಯನಾಗಬೇಕು
    ...ಆ) ಆತನು ಊಟಮಾಡಬಾರದು
21. ಉತ್ತಮ, ಅವಲಂಬಿತ ಕೆಲಸವು
    ...ಅ) ನಮ್ಮ ಸಾಕ್ಷಿಗೆ ಒಂದು ಅಡ್ಡಿಯಾಗಿದೆ
    ...ಆ) ನಿಮ್ಮ ದೀಪ ಬೆಳಗಲು ಒಂದು ಉತ್ತಮ ಮಾರ್ಗ
    ...ಇ) ಪ್ರಾಮುಖ್ಯವಾದದ್ದು

ಉತ್ತರಗಳು : **20.ಆ)** ಆತನು ಊಟಮಾಡಬಾರದು **21.ಆ)** ನಿಮ್ಮ ದೀಪ ಬೆಳಗಲು ಒಂದು ಉತ್ತಮ ಮಾರ್ಗ

**ನಿಮ್ಮ ಕುಟುಂಬದೊಂದಿಗೆ ಸರಿಯಾದ ವರ್ತನೆ**

ತಮ್ಮನ್ನು ಶಿಷ್ಯರೆಂದು ಹೇಳಿಕೊಳ್ಳುವವರ ಮನೆಗಳಲ್ಲಾಗುವ ಜಗಳಗಳನ್ನು ನೋಡಿದ ಅನೇಕರು ಸುವಾರ್ತೆಯಲ್ಲಿ ಆಸಕ್ತಿಯೆಲ್ಲ ಕಳೆದುಕೊಂಡಿದ್ದಾರೆ. ಇನ್ನೊಂದು ಕಡೆಯಲ್ಲಿ, ಪ್ರಸಂಗದಲ್ಲಿ ಹೆಚ್ಚಿನ ಆಸಕ್ತಿಯಿಲ್ಲದ ಅನೇಕರು ಒಬ್ಬ ಶಿಷ್ಯನ ಮನೆಯಲ್ಲಿದ್ದ ತಾಳ್ಮೆ ಪ್ರೀತಿ ಮತ್ತು ಕರ್ತನಲ್ಲಿರುವ ಸಂತೋಷವನ್ನು ನೋಡಿ ಕ್ರಿಸ್ತನನ್ನು ಕಂಡುಕೊಂಡಿದ್ದಾರೆ.

**ನೀವು ಮಾಡಬೇಕಾದದ್ದು**

22. ನೀವು ಯಾವ ಮಾರ್ಗಗಳಲ್ಲಿ ನಿಮ್ಮ ಬೆಳಕು ಬೆಳಗಬೇಕೆನ್ನುತ್ತೀರೋ? ಅವುಗಳಿಗಾಗಿ ಹಿಂದಕ್ಕೆ ನೋಡಿರಿ ಮತ್ತು ಆ ಪ್ರತಿಯೊಂದರಲ್ಲಿ ಸಹಾಯ ಮಾಡುವಂತೆ ಕರ್ತನನ್ನು ಪ್ರಾರ್ಥಿಸಿರಿ.